**ಸಾಕ್ಷಿಯನ್ನು ದಿನಾಂಕ 13.11.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 4 ಹಾಗೂ 8 ರಿಂದ 21 ನೇ ಪ್ರತಿವಾದಿ ಪರ ಶ್ರೀ ಎಸ್.ಪಿ ವಕೀಲರಿಂದಃ**

ನಾನು 4 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಾತ ಶೇಖರಪ್ಪ ಯಾವ ವರ್ಷದಲ್ಲಿ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಾತನಿಗೆ ಶಿವಣ್ಣ, ನಾಗಣ್ಣ, ಸೋಮಶೇಖರಪ್ಪ ಹಾಗೂ ಶಿವಮ್ಮ ಎಂಬ ಮಕ್ಕಳಿದ್ದರು ಎಂದರೆ ಸರಿ. ಸದರಿ ಶಿವಣ್ಣರವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ಈಗ ನೆನಪಿರುವುದಿಲ್ಲ. ನನ್ನ ತಂದೆ ಸೋಮಶೇಖರಪ್ಪ ರವರು ದಿನಾಂಕ 7.11.2008 ರಂದು ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಂಡಾಗ ಶಿವಣ್ಣ ರವರು ಬದುಕಿದ್ದರು ಎಂದರೆ ಸರಿಯಲ್ಲ. ಮೇಲೆ ಹೇಳಿದ ನಾಗಣ್ಣ ಮತ್ತು ಶಿವಮ್ಮ ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಈಗ ನೆನಪಿರುವುದಿಲ್ಲ. ನನ್ನ ತಂದೆ ಬದುಕಿದ್ದಾಗ ಅವರ ಸಹೋದರರ ನಡುವೆ ವಿಭಾಗಕ್ಕೆ ಸಂಬಂಧಪಟ್ಟಂತೆ ಯಾವುದೇ ವ್ಯಾಜ್ಯ ಇರಲಿಲ್ಲ. ನನ್ನ ಅತ್ತೆ ಶಿವಮ್ಮ ರವರನ್ನು ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದರೆ ಸರಿ. ನನ್ನ ತಾತನಿಗೆ ಒಟ್ಟು 9-10 ಎಕರೆ ಜಮೀನು ಇತ್ತು. ಆ ಬಗ್ಗೆ ದಾಖಲೆಯನ್ನು ನಾನು ನೋಡಿರುವುದಿಲ್ಲ, ನನ್ನ ತಂದೆ ಹೇಳುತ್ತಿದ್ದರು. 9-10 ಎಕರೆ ಜಮೀನು ಇದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ತಾತ ಶೇಖರಪ್ಪನಿಗೆ ಹಳ್ಳದಮನುಗನಹಳ್ಳಿಯಲ್ಲಿ ಮನೆ ಇತ್ತು ಎಂದರೆ ಸರಿ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ನನ್ನ ತಂದೆ ಹೆಬ್ಬೆಟ್ಟು ಗುರುತನ್ನು ಹಾಕುತ್ತಿದ್ದರು. ನನ್ನ ತಂದೆ ಹೆಬ್ಬೆಟ್ಟು ಗುರುತು ಹಾಕುತ್ತಿರಲಿಲ್ಲ, ಸಹಿ ಮಾಡುತ್ತಿದ್ದರು ಎಂದರೆ ಸಾಕ್ಷಿದಾರರು ಹೆಬ್ಬೆಟ್ಟು ಗುರುತು ಮತ್ತು ಸಹಿ ಎರಡನ್ನು ಹಾಕುತ್ತಿದ್ದರು ಎನ್ನುವರು. ನನ್ನ ತಂದೆಯ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನ ತಂದೆಯ ಸಹಿಯಾಗಿರುವುದಿಲ್ಲ. ಸಾಕ್ಷಿದಾರರಿಗೆ ದಿನಾಂಕ 30.3.1983 ರ ನೋಂದಾಯಿತ ಕ್ರಯಪತ್ರವನ್ನು ತೋರಿಸಲಾಗಿರುತ್ತದೆ. ದಿನಾಂಕ 22.7.2019 ರಂದು ಆಗಿದೆ ಎಂದು ಹೇಳುವ ವಿಭಾಗಪತ್ರದ ಪೂರ್ವದಲ್ಲಿ ಆಸ್ತಿಗಳ ಖಾತೆಯು ನನ್ನ ತಾತನ ಹೆಸರಿನಲ್ಲಿತ್ತು. ದಿನಾಂಕ 22.7.2019 ರ ಹಿಂದಿನ ಪಹಣಿಗಳನ್ನು ನಾನು ನೋಡಿರುವುದಿಲ್ಲ ಮತ್ತು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಿನಾಂಕ 22.7.2019 ರ ಪೂರ್ವದಲ್ಲಿ ದಾವಆಸ್ತಿಗಳ ಪಹಣಿಯು ನನ್ನ ತಾತನ ಮೊದಲನೇ ಮಗ ಶಿವಣ್ಣರವರ ಹೆಸರಿನಲ್ಲಿತ್ತು ಎಂದರೆ ಸರಿ. ಸದರಿ ಶಿವಣ್ಣನಿಗೆ 3 ಜನ ಮಕ್ಕಳಿರುತ್ತಾರೆ ಎಂದರೆ ಸರಿ. ಶಿವಣ್ಣರವರ ಪಾಲಿಗೆ ಬಂದ ಆಸ್ತಿಗಳನ್ನು ಅವರ ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ನನ್ನ ತಂದೆ ನಾನು ಯಾವುದೇ ದಾಖಲೆಗೆ ಸಹಿ ಮಾಡಿರುವುದಿಲ್ಲ, ವಿಭಾಗವಾಗಿರುವುದಿಲ್ಲ ಎಂದು ಹೇಳುತ್ತಿದ್ದರು ಎನ್ನುವರು. ಆ ರೀತಿ ಯಾವಾಗ ಹೇಳಿರುತ್ತಾರೆ ಎಂದು ಈಗ ಮರೆತು ಹೋಗಿರುತ್ತದೆ. ನನ್ನ ತಂದೆ ವಿಭಾಗವಾಗಿರುವುದಿಲ್ಲ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. 1 ರಿಂದ 9 ನೇ ಪ್ರತಿವಾದಿಯರು ವಿಭಾಗ ಮಾಡಿಕೊಂಡ ನಂತರ 5 ರಿಂದ 7 ನೇ ಪ್ರತಿವಾದಿಯರು ಅವರ ಪಾಲಿಗೆ ಬಂದ

ಆಸ್ತಿಯನ್ನು 23 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿರುವುದಿಲ್ಲ ಎನ್ನುವರು. ದಾವೆ ದಾಖಲಿಸುವ ಪೂರ್ವದಲ್ಲಿ ಶಿವಣ್ಣ ಮತ್ತು ನಾಗಣ್ಣನವರ ಹೆಸರಿನಲ್ಲಿದ್ದ ಖಾತೆಯನ್ನು ನಾನು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ. ನನ್ನ ತಂದೆ ಮತ್ತು ಅವರ ಇಬ್ಬರು ಸಹೋದರರು ಸೇರಿ 1974 ರಲ್ಲಿ ಸರ್ವೆ ನಂ.82 ರಲ್ಲಿ 1-15 ಎಕರೆ ಜಮೀನನ್ನು ಭದ್ರಕಾಳಮ್ಮನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಮಾರಾಟ ಮಾಡಿ ಉಳಿದ 7-35 ಎಕರೆ ಜಮೀನನ್ನು ನನ್ನ ತಂದೆ ಮತ್ತು ಅವರ ಸಹೋದರರು ತಲಾ 2-25 ಎಕರೆಯಂತೆ 1975 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಶಿವಣ್ಣರವರ ಪಾಲಿಗೆ ಬಂದಿದ್ದ 2-25 ಎಕರೆ ಜಮೀನನ್ನು ದಿನಾಂಕ 10.7.1975 ರಂದು ನನ್ನ ತಂದೆಗೆ ನೋಂದಾಯಿತ ಭೋಗ್ಯ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ನಂತರ ಸದರಿ ಶಿವಣ್ಣರವರು ಭೋಗ್ಯವನ್ನು ಬಿಡಿಸಿಕೊಂಡು ಸದರಿ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ಅವರ ಪಾಲಿಗೆ ಬಂದಿದ್ದ 2-25 ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನಂತರ ನನ್ನ ತಂದೆ ಅವರ ಪಾಲಿಗೆ ಬಂದಿದ್ದ 2-25 ಎಕರೆ ಜಮೀನನು ದಿನಾಂಕ 30.3.1983 ರಂದು ಶಿವಣ್ಣರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.